**Order Sheet**
**In the Court Of: PRL. CIVIL JUDGE AND JMFC BELAGAVI AT BELGAUM**
**F.R.No:O.S./688/2016**
**Case Reg.No: O.S./686/2016**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Sri. Rajendra S/o. Ramchandra Shreyakar, R/o. H.No. 1896, Dhor galli, Madhavpur Vadagaon, Belagai.** | **1)Sri. Shivdas F. Pol, R/o. H.No. 1897 Dhor galli, Madhavpur Vadagaon, Belagavi. &3 others**<br><br>**2)Sri. Mahesh G. Pol. R/o. H.No. 1898 Dhor galli, Madhavpur Vadagaon, Belagavi.**<br>**3)Sri. Vitthal Pol, R/o. H.No. 1899, Dhor galli, Madhavpur Vadagaon, Belagavi.**<br>**4)Sri. Natraj R. Kadam, R/o. H.No. 1875 Dhor galli, Madhavpur, Vadagaon, Belagavi.** |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 03.08.2017.**
**ಪಾಟೀ ಸವಾಲುಃ ಶ್ರೀ ವೈ ಜಿ ಜಿ ವಕೀಲರಿಂದ.**

ದಾವಾ ಆಸ್ತಿ ಸಂಖ್ಯೆ 1896. ಅದರ ವಿಸ್ತೀರ್ಣ ಉತ್ತರ ದಕ್ಷಿಣ 24 ಅಡಿಗಳು. ಪೂರ್ವ ಪಶ್ಚಿಮ 300 ಅಡಿಗಳು. ಆಸ್ತಿಗೆ ನಾನೇ ಮಾಲೀಕ. ಸದರಿ ಆಸ್ತಿಯನ್ನು 08.06.1943 ರಲ್ಲಿ ನನ್ನ ತಂದೆ ಖರೀದಿ ಮಾಡಿದ ಆಸ್ತಿ. ಸದರಿ ಕ್ರಯಪತ್ರದ ಭಾಷಂತರ ಪ್ರತಿಯನ್ನು ನನ್ನ ತಂದೆ ಖರೀದಿಸಿದ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 200 ಮೊಳ ಹಾಗೂ ಉತ್ತರ ದಕ್ಷಿಣ 16 ಮೊಳಗಳು ಎಂದು ಕಾಣಿಸಿದೆ ಎಂದರೆ ಸರಿ. ಈ ದಾವಾ ದಾಖಲಿಸಲು ಮಾಹಿತಿ ನಾನೇ ನೀಡಿದ್ದೆನು.

ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಿ ಕಂದಕ, ಪಶ್ಚಿಮಕ್ಕೆ ದಾಮನೆ ರಸ್ತೆ, ಉತ್ತರಕ್ಕೆ ಖರೀದಿ ಪತ್ರದಲ್ಲಿ ಮಲ್ಲಪ್ಪ ರಾಜಾರಾಮ ಪೋಳರ ಆಸ್ತಿ , ದಕ್ಷಿಣಕ್ಕೆ ಪ್ರಭು ಕದಂ ಅವರ ಆಸ್ತಿ ಇದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆ ಇದ್ದು,

ಅದರ ಪಶ್ಚಿಮಕ್ಕೆ ನನ್ನ ಮನೆ ಇದೆ. ಆ ವಿಷಯವನ್ನು ದಾವಾ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿ

ದಾವಾ ಆಸ್ತಿಯ ದಕ್ಷಿಣಕ್ಕೆ ಎರಡೂವರೆ ಅಡಿಗಳು ಪ್ರತಿವಾದಿಗಳ ಮಾಲೀಕತ್ವದ ಜಾಗ ಎಂದರೆ ಸರಿಯಲ್ಲ. ಆ ಎರಡುವರೆ ಅಡಿ ಜಾಗದಲ್ಲಿ ಪ್ರತಿವಾದಿ ಶೌಚಾಲಯ ಮತ್ತು ಚರಂಡಿ ಪೈಪನ್ನು ಅಳವಡಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣದ ದಿಕ್ಕಿನಲ್ಲಿ ಪ್ರತಿವಾದಿಗಳ ಮನೆಯ ಬಾಗಿಲು ಮತ್ತು ಕಿಟಕಿಗಳು ಇದೆ ಎಂದರೆ ಸರಿ. ಸದರಿ ಎರಡೂವರೆ ಅಡಿ ಪ್ರತಿವಾದಿಗಳ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿ. ಆ ಜಾಗವನ್ನು ಬಳಸಿಕೊಳ್ಳಬಾರದೆಂದು ನಾನು ಪ್ರತಿವಾದಿಗಳಿಗೆ ತಕರಾರು ಮಾಡಿದ್ದೇನೆಂದರೆ ಸರಿ. ಸದರಿ ಎರಡೂವರೆ ಅಡಿ ಜಾಗದಲ್ಲಿ ಪ್ರತಿವಾದಿಗಳು ಗಿಡವನ್ನು ಬೆಳೆಸಿದ್ದು, ನಾನು ಅದನ್ನು ಅವರಿಗೆ ಬಿಟ್ಟುಕೊಡುವಂತೆ ಕೇಳಿಕೊಂಡಿದ್ದರೂ ಕೂಡ ಆ ಜಾಗದ ಸ್ವಾಧೀನವನ್ನು ಬಿಟ್ಟುಕೊಟ್ಟಿಲ್ಲ. ಕಳೆದ ಮೂರು ವರ್ಷಗಳ ಹಿಂದೆ ಆ ರೀತಿ ಅವರಿಗೆ ಕೇಳಿಕೊಂಡಿದ್ದೆನು.

ದಾವಾ ಆಸ್ತಿಯ ದಕ್ಷಿಣಕ್ಕೆ ಇರುವ ಎರಡೂವರೆ ಅಡಿಗಳ ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಗಳ ಮನೆಯ ಮುಂಬಾಗದ ಪೋಟೋವನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ತೆಂಗಿನ ಸಸಿ ಇರುವಂತಹ ಜಾಗವನ್ನು ಸೇರಿಸಿ ಮನೆಯ ಮುಂಬಾಗ ಬರುವ ಎರಡೂವರೆ ಅಡಿಗಳು ಪ್ರತಿವಾದಿಗಳ ಸ್ವಾಧೀನವಿದೆ ಎಂದು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಪೋಟೋವನ್ನು ನಿಡಿ 1 ಎಂಬುದಾಗಿ ವಾದಿ ವಕೀಲರ ಸಮಕ್ಷಮ ಗುರುತಿಸಲಾಯಿತು. ಪ್ರತಿವಾದಿಗಳ ಮನೆ ಮುಂಬಾಗದ ಮುಖ್ಯ ದ್ವಾರ ಹಾಗೂ ಕಿಟಕಿಗಳಿಗೆ ಸಂಬಂಧಿಸಿದಂತೆ ಪೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿಕೊಂಡ ಮೇರೆಗೆ ನಿಡಿ 2 ಎಂದು ಗುರುತಿಸಲಾಯಿತು. ಪ್ರತಿವಾದಿಯ ಮನೆಗೆ ಹೋಗಿ ಬರಲು ನಿಡಿ 1 ಪೋಟೋದಲ್ಲಿ ಕಂಡುಬರುವ ಮಣ್ಣು ರಸ್ತೆ ಮುಖಾಂತರ ಸಾಗಬೇಕು ಎಂದರೆ ಸರಿ. ಸದರಿ ರಸ್ತೆಯ ವಿನಃ ಪ್ರತಿವಾದಿಗಳ ಮನೆಗೆ ಹೋಗಿ ಬರಲು ಅನ್ಯ ಮಾರ್ಗ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆ ಮುಖಾಂತರ ಪ್ರತಿವಾದಿಗಳು ನನಗೆ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನವನ್ನು ಬಳಸೂತ್ತಾರೆಂದರೆ ಸರಿ ಸಾಕ್ಷಿ ಸದರಿ ರಸ್ತೆಯ ಪಕ್ಕದಲ್ಲಿ ಪ್ರತಿವಾದಿಗಳು ನಾಲ್ಕು ಚಕ್ರದ ಇನ್ನೋವ ಕಾರನ್ನು ನಿಲ್ಲಿಸುತ್ತಾರೆಂದು ಸಾಕ್ಷಿಗೆ ಪೋಟೋವನ್ನು ತೋರಿಸಿ ಸಾಕ್ಷಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ 3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಡಿ 1 ಪೋಟೋವನ್ನು ತೋರಿಸಲಾಗಿ ಅದರಲ್ಲಿ ದಾವಾ ಆಸ್ತಿಯ ದಕ್ಷಿಣದ ಭಾಗ ಪ್ರತಿವಾದಿಗಳ ಮನೆಯ ಬಾಗಿಲಿನವರೆಗೆ ಬರುತ್ತದೆ ಎಂದು ನುಡಿಯುತ್ತಾರೆ. ಈ ದವೆಯನ್ನು ಪ್ರತಿವಾದಿ ಮನೆಯ ಬಾಗಿಲಿನವರೆಗೂ ಸೇರಿಸಿ ದಾಖಲಿಸಿದ್ದೀವಿ ಎಂದರೆ ಸರಿಯಲ್ಲ. ಸಾಕ್ಷಿ ಪ್ರತಿವಾದಿಗಳ ಮನೆಯ ಮುಂದೆ ಎರಡೂವರೆ ಅಡಿ ಜಾಗವನ್ನು ಹೊರತುಪಡಿಸಿ ದಾವೆಯನ್ನು ದಾಖಲಿಸಿದ್ದಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಿಡಿ 1 ಪೋಟೋದಲ್ಲಿ ಕಂಡುಬರುವ ರಸ್ತೆ ಸೇರಿಸಿ ದಾಖಲಿಸಿದ್ದೇನೆ. ಪ್ರತಿವಾದಿಗಳ ಮನೆ ಮುಂಬಾಗದ ಎರಡೂವರೆ ಅಡಿ

ಜಾಗ ನನ್ನ ಜಾಗ. ಆ ಎರಡೂವರೆ ಅಡಿ ಜಾಗ ನನ್ನದು ಎಂದು ತೋರಿಸಲು ಕ್ರಯಪತ್ರ ಹಾಜರು ಪಡಿಸಿದ್ದೇನೆ ವಿನಃ ಬೇರೆ ದಾಖಲೆ ಹಾಜರು ಪಡಿಸಿಲ್ಲ.

ಪ್ರತಿವಾದಿಗಳು ತಮ್ಮ ಆಸ್ತಿಯನ್ನು ಅಳತೆ ಮಾಡಿಸುವ ಸಲುವಾಗಿ ಸರ್ವೇ ಇಲಾಖೆಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಪ್ರತಿವಾದಿ ಸಲ್ಲಿಸಿದ ಅರ್ಜಿಗಳನ್ನು ತೋರಿಸಲಾಗಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಅರ್ಜಿಯ ಸಂಬಂಧ ಸರ್ವೇ ಇಲಾಖೆಯವರು ನನಗೂ ಕೂಡ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಸಮಯವನ್ನು ನೀಡಿ ಮುಂದೂಡಲಾಯಿತು.

**(ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ. ಸರಿಯಿದೆ.**

ಸಹಿ /-

**ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,**
**ಜೆ ಎಮ್ ಎಫ್ ಸಿ, ಬೆಳಗಾವಿ.**